ವರ್ತಕರಿಗೆ ಕೊಟ್ಟಿದ್ದೇವೆ. ಮೊದಲು ಸಹಕಾರ ಸಂಸ್ಥೆಗಳಿಗೆ ಕೊಟ್ಟು ಆಮೇಲೆ ವರ್ತಕರಿಗೆ ಕೊಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅರ್ಬನ್ ಏರಿಯಾದಲ್ಲಿರುವವರು ಸಕ್ಕರೆ ಜಾಸ್ತಿ ತೆಗೆದುಕೊಳ್ಳುತ್ತಾರೆ, ಹಳ್ಳಿಗಾಡಿನಲ್ಲಿರುವವರು ಬೆಲ್ಲ ಜಾಸ್ತಿ ತೆಗೆದುಕೊಳ್ಳುತ್ತಾ ಇದ್ದಾರೆ ಎಂದು ತಾವು ಹೇಳಿದಿರಿ. ಎರಡು ಪಂಚವಾರ್ಷಿಕ ಯೋಜನೆಗಳು ಮುಗಿದ ಮೇಲೆ ಇವತ್ತಿನ ದಿವಸ ಸಕ್ಕರೆ ತೆಗೆದುಕೊಳ್ಳಬೇಕೆಂಬ ಆಶಾ ಭಾವನೆ ಜನರಲ್ಲಿ ಬಂದಿರುವುದರಿಂದ ಅರ್ಬನ್ ಮತ್ತು ರೂರಲ್‌ಗೆ ಇರತಕ್ಕ ತಾರತಮ್ಯವನ್ನು ಕಡಮೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕ್ರಮೇಣ, ಸಕ್ಕರೆ ಕಾರ್ಖಾನೆಗಳು ಹೆಚ್ಚಾದಷ್ಟೂ ಸಕ್ಕರೆ ಉತ್ಪಾದನೆ ಹೆಚ್ಚಾಗುತ್ತದೆ, ಲಬರಲ್ ಆಗಿ ಸಕ್ಕರೆ ಕೊಡುವುದಕ್ಕೆ ಯಾವ ತೊಂದರೆಯೂ ಇರುವುದಿಲ್ಲ. ಎಲ್ಲರಿಗೂ ಹೆಚ್ಚಾಗಿ ಕೊಡುವುದಕ್ಕೆ ಸಾಧ್ಯವಾಗುವಂತಹ ಒಂದು ಸ್ಥಿತಿಯಲ್ಲಿ ಸರ್ಕಾರ ಇರುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರಾಜ್ಯದಲ್ಲಿ ಕೊಡುತ್ತಾ ಇರತಕ್ಕ ಸಕ್ಕರೆ ಅರ್ಬನ್ ಏರಿಯಾಕ್ಕೆ ಎಷ್ಟು ? ರೂರಲ್ ಏರಿಯಾಕ್ಕೆ ಎಷ್ಟು ?

ಶ್ರೀ ಎಂ. ವಿ ಕೃಷ್ಣಪ್ಪ.—ಆ ರೀತಿ ಏನೂ ವ್ಯತ್ಯಾಸ ಇಲ್ಲ, ಈಗಿನ ಅಂದಾಜಿನ ಪ್ರಕಾರ ರೂರಲ್ ಪಾಪ್ಯುಲೇಷನ್ ಅರ್ಧ ಪೌಂಡ್ ತೆಗೆದುಕೊಳ್ಳುತ್ತಾರೆ, ಅರ್ಬನ್ ಪಾಪ್ಯುಲೇಷನ್ ಒಂದೂವರೆ ಪೌಂಡ್ ತೆಗೆದುಕೊಳ್ಳುತ್ತಾರೆ, ಈ ರೀತಿ ಒಂದು ಕೋಟಾ ಇಂಡಿಯಾ ಸರ್ಕಾರದವರು ಅಲಾಟ್ ಮಾಡುತ್ತಾರೆ, ನಾವೇನೂ ಅದರಲ್ಲಿ ವ್ಯತ್ಯಾಸ ಮಾಡಿಲ್ಲ ಸಕ್ಕರೆ ಡೀಲರ್ಸ್ ಯಾರು ಎಂಬುದನ್ನು ಗೊತ್ತುಮಾಡಿದ್ದೇವೆಯೇ ಹೊರತು ಇಂತಿಂಥವರಿಗೇ ಮಾರಬೇಕು, ಹಳ್ಳಿಯವರಿಗೆ ಮಾರಬಾರದು ಎಂದು ಅಲ್ಲ, ಒಂದು ಸಲ ಬೇಕಾದಷ್ಟೂ ತೆಗೆದುಕೊಳ್ಳಬಹುದು ಹತ್ತು ಸಲ ಬೇಕಾದರೂ ತೆಗೆದುಕೊಳ್ಳಬಹುದು. ಯಾವ ತರಹದ ನಿರ್ಬಂಧವನ್ನೂ ಸಹ ಮಾಡಿಲ್ಲ. ಬೆಳಗಾಂ, ಧಾರವಾಡ ಮತ್ತು ಮಂಗಳೂರಿನಲ್ಲಿ ಅಲ್ಲಿನ ಡೆಪ್ಯೂಟಿ ಕಮಿಷನರು ರೇಷನ್ ಕಾರ್ಡ್ ಇಂಟ್ರೋಡ್ಯೂಸ್ ಮಾಡಿದರು. ಆಗ ಅವರು ಇಷ್ಟೇ ಒಂದು ಸಲಕ್ಕೆ ತೆಗೆದುಕೊಳ್ಳಬೇಕೆಂದು ನಿಗದಿ ಮಾಡಿದ್ದರು, ಅಷ್ಟೆ.

Sri N. O. SAMAJI.— (Marathi)

Sri M. V. KRISHNAPPA.—I have already answered that question.

Preparation of a Master Plan for Minor Irrigation Works in Kunigal Taluk.

*Q.—1021. Sri ANDANAIAH (Kunigal).—

Will the Government be pleased to state :—

(*a*) whether any action has been taken by the P.W.D. for the preparation of Master Plan regarding Minor Irrigation Works in Kunigal Taluk ;

(*b*) if so, the number of such works proposed to be executed in Kunigal Taluk, together with the estimated cost thereof ;

(*c*) the extent of atchkat that would come under irrigation after the completion of these works ?

*A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) One hundred and fifty-one works estimated to cost Rs. 41.60 lakhs approximately.

(*c*) About 5877 acres of fresh atchkat and about 6051 acres of old atchkat being assured of water supply.

ಶ್ರೀ ಅಂದಾನಯ್ಯ.—ಈ 151 ಕೆಲಸಗಳನ್ನು ಸರ್ವೇ ಮಾಡಿ, ಎಸ್ಟಿಮೇಟ್ ತಯಾರು ಮಾಡ ಬೇಕಾದರೆ ಈಗಿರತಕ್ಕ ಸಿಬ್ಬಂದಿಗೆ ಎಷ್ಟು ಕಾಲ ಹಿಡಿಯಬಹುದು ?

† ಶ್ರೀ ಅಲೂರು ಹನುಮಂತಪ್ಪ.—ಅವರು ಒಂದು ಸರ್ವೇ ಮಾಡಿಕೊಂಡಿದ್ದಾರೆ, ಇನ್ನೂ ಹೆಚ್ಚು ಸಿಬ್ಬಂದಿ ಕೊಟ್ಟು ಟಾಪ್ ಪ್ರಯಾರಿಟಿ ಬೇಸಿಸ್ ಮೇಲೆ ಯಾವ ಹೋಬಳಿಗಳಲ್ಲಿ, ಯಾವ ಗ್ರಾಮಗಳಲ್ಲಿ ಇದುವರೆಗೂ ನೀರಾವರಿ ಯೋಜನೆ ಇಲ್ಲವೋ ಆ ಕಡೆ ಸರ್ವೆ ಮಾಡಿಸಿದರೆ ಒಂದು ವರ್ಷದಲ್ಲಿ ಮಾಡಿ ಮುಗಿಸಬಹುದು.

Sri G. V. GOWDA.—May I know whether the preparation of a Master Plan for Minor Irrigation Works is confined to a particular Taluk or whether it is undertaken throughout the State ?

Sri ALUR HANUMANTHAPPA.—Throughout the State in almost all taluks, we have directed the Engineers to take up this Master Plan work to survey new projects and collect data in those particular Taluks.

Sri G. V. GOWDA.—May I know whether the Deputy Minister will be ab e to tell me the number of Taluks for which this Master Plan has been prepared ?

Sri ALUR HANUMANTHAPPA.—In regand to almost all the Taluks in the State they have prepared the Master Plan.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾಸ್ಟರ್ ಪ್ಲಾನ್ ತಯಾರು ಮಾಡಿನುವ ಉದ್ದೇಶವೇನು ? ಹಣ ಕೊಡುತ್ತೀರಾ ಇಲ್ಲವೋ ಪ್ಲಾನ್ ಎಸ್ಟಿಮೇಟ್ ಮಾಡಿಸುತ್ತೀರಾ ?

ಶ್ರೀ ಅಲೂರು ಹನುಮಂತಪ್ಪ.—ಯಾವ ಯಾವ ತಾಲ್ಲೂಕಿನಲ್ಲಿ ಹೆಚ್ಚುವರಿ ನೀರು ಇದೆ, ಎಷ್ಟು ಹೊಸ ಪ್ರಾಜೆಕ್ಟುಗಳನ್ನು ಮಾಡಬಹುದು, ಹೊಸದಾಗಿ ಎಷ್ಟು ಎಕರೆ ಜಮೀನು ಆ ತಾಲ್ಲೂಕಿನಲ್ಲಿ ನೀರಾವರಿಗೆ ಬರಬಹುದು ಎಂಬುದನ್ನು ಎಸ್ಟಿಮೇಟ್‌ಮಾಡಿ ಅದಕ್ಕೆ ಬೇಕಾಗತಕ್ಕ ಹಣವನ್ನು ಸಹ ಒದಗಿಸಬೇಕೆಂಬ ಉದ್ದೇಶದಿಂದಲೇ ಮಾಸ್ಟರ್ ಪ್ಲಾನ್ ತಯಾರು ಮಾಡುವುದು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈಗ ಎಸ್ಟಿಮೇಟ್ ರೆಡಿಯಾಗಿರುವುದಕ್ಕೆ ಹಣ ಕೊಡುತ್ತೀರಾ ?

ಶ್ರೀ ಅಲೂರು ಹನುಮಂತಪ್ಪ.—ಈಗಾಗಲೇ ಕೊಡುತ್ತಾ ಇದ್ದೇವೆ, ಕೆಲಸ ಬಹಳವಾಗಿ ನಡೆಯುತ್ತಾ ಇದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸಂಸ್ಥಾನಾಮಳೆ ಮಾಸ್ಟರ್ ಪ್ಲಾನ್ ತಯಾರು ಮಾಡಿರುವ ಈ ಒಂದು ಕ್ರಮದಿಂದ ಎಷ್ಟು ದುಡ್ಡು ಈ ಕೆರೆಗಳಿಗೆ ಬೇಕಾಗುತ್ತದೆ ?

ಶ್ರೀ ಅಲೂರು ಹನುಮಂತಪ್ಪ.—ಎಲ್ಲಾ ಕಡೆಯಲ್ಲೂ ಮಾಸ್ಟರ್ ಪ್ಲಾನ್ ತಯಾರು ಮಾಡಿದ ಮೇಲೆ ಒಂದು ಅಂದಾಜು ಗೊತ್ತಾಗುತ್ತದೆ. ಈಗಿರತಕ್ಕ 12 ಲಕ್ಷ ಎಕರೆಯನ್ನು ಇನ್ನೂ 12 ಲಕ್ಷ ಎಕರೆಗೆ ಏರಿಸಬಹುದು ಅದಕ್ಕೆ ಯಾವ ಅಡ್ಡಿಯೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈಗಾಗಲೇ ಪ್ಲಾನ್ ರೆಡಿಯಾಗಿ ಕೆಲಸ ತೆಗೆದ ಕೊಳ್ಳುವುದಕ್ಕೆ ಸಿದ್ಧವಾಗಿರತಕ್ಕ ಕೆಲಸಕ್ಕೆ ಹಣ ಇಲ್ಲ ನಿಧಾನ ಮಾಡಿ ಎಂದು ಸರ್ಕ್ಯುಲರ್ ಬರುತ್ತಾ ಇದೆ, ಇದಕ್ಕೆ ಕಾರಣವೇನು ? ಈಗ ಅಂದಾಜು ತಯಾರಾಗಿರುವ ಕಾಮಗಾರಿ ಮಾಡಿಸುವುದಕ್ಕೆ ವ್ಯವಸೆ ಮಾಡುತ್ತೀರಾ ?

ಶ್ರೀ ಅಲೂರು ಹನುಮಂತಪ್ಪ.—ನಮ್ಮಲ್ಲಿ ಪ್ಲಾನ್ ತಯಾರಾಗಿದ್ದು, ಎಸ್ಟಿಮೇಟ್ ಸಹ ರೆಡಿಯಾಗಿದ್ದು ಕೇಂದ್ರದಿಂದ ಹಣ ಸಿಕ್ಕುತ್ತಾ ಇದೆ, ಈ ವರ್ಷ ಸಹ ಕೇಂದ್ರದಿಂದ ಹಣ ಬಂದಿದೆ ಎಂಬುದನ್ನು ಈಗಾಗಲೇ ಹೇಳಿದ್ದೇನೆ. ಸಾಧ್ಯವಾದಮಟ್ಟಿಗೂ ಹೆಚ್ಚಿನ ಕೆಲಸ ಮಾಡಿ ಮುಗಿಸ ಬೇಕೆಂದು ಎಲ್ಲಾ ತಾಲ್ಲೂಕಿನಲ್ಲೂ ಕೆಲಸ ತೆಗೆದುಕೊಂಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಒಂದು ವರ್ಷದಲ್ಲಿ ಈ 151 ಕೆಲಸಗಳನ್ನೂ ಸರ್ವೇ ಮಾಡಿಸಿ, ಎಸ್ಟಿಮೇಟ್ ಮಾಡಿಸುತ್ತೇವೆ ಎಂದು ಹೇಳಿದಿರಿ. ಅದಕ್ಕೆ ಸಾಕಾದಷ್ಟು ಸಿಬ್ಬಂದಿ ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಅಲೂರು ಹನುಮಂತಪ್ಪ.—151 ಕೆಲಸಗಳೂ ಹೊಸ ಕೆಲಸಗಳು, ಇದರ ಅವಶ್ಯಕತೆ ಅಲ್ಲಿ ಇದೆ ಎಂದು ಗೊತ್ತಾಗಿದೆ, ಈ 151 ಕೆಲಸಗಳನ್ನೂ ಒಂದೇ ಸಾರಿ ತೆಗೆದುಕೊಳ್ಳುತ್ತೇವೆ ಅಂತಲೂ ಅಲ್ಲ, ಟಾಪ್ ಪ್ರಯಾರಿಟಿ ಬೇಸಿಸ್ ಮೇಲೆ ಎಲ್ಲಿ ಯಾವ ಗ್ರಾಮಕ್ಕೆ ನೀರಾವರಿ ಯೋಜನೆ ಇಲ್ಲವೋ ಅಂಥಾದ್ದಕ್ಕೆ ಅದ್ಯತೆ ಕೊಟ್ಟು ಅಂತಹ ಕೆಲಸಗಳನ್ನು ಬೇಗ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ, ಎಸ್ಟಿಮೇಟುಗಳ ನ್ಯೂಟಿನಿ ಮತ್ತು ಪ್ಲಾನ್ ತಯಾರು ಮಾಡುವುದು ಈ ಎಲ್ಲದಕ್ಕೂ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದೆ.

ಶ್ರೀ ಜಿ. ರಾಮೇಗೌಡ.—ಈ 44 ಲಕ್ಷ ರೂಪಾಯಿಗಳ ಕೆಲಸಗಳನ್ನು ಎಷ್ಟು ವರ್ಷಗಳಲ್ಲಿ ಮಾಡಿ ಮುಗಿಸುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಮಂಜೂರಾಗಿರತಕ್ಕ ಕೆಲಸಗಳು ಬೇರೆ ಇವೆ, ಹಳ್ಳಿವಾರು ಸರ್ವೇ ಮಾಡಬೇಕು, ವಿಶೇಷವಾಗಿ ಹೆಚ್ಚುವರಿ ನೀರು ಯಾವ ತಾಲ್ಲೂಕಿನಲ್ಲಿ ಇದೆ, ಒಂದು ಹಳ್ಳಿಗೂ ಇನ್ನೊಂದು ಹಳ್ಳಿಗೂ ಇಂಟರ್ ಕನೆಕ್ಷನ್ ಇದೆಯೇ ಎಂಬುದನ್ನೆಲ್ಲಾ ಸರ್ವೇ ಮಾಡಿ ನೋಡಬೇಕು. ಮಾಸ್ಟರ್ ಪ್ಲಾನ್‌ನಲ್ಲಿ ಇಂಥಾ ಕೆಲಸಗಳನ್ನು ಮಾಡುತ್ತಾ ಇದ್ದಾರೆ, ಈಗ ಕುಣಿಗಲ್ ತಾಲ್ಲೂಕಿನಲ್ಲಿ ಮಂಜೂರಾಗಿರುವ ಎಸ್ಟಿಮೇಟುಗಳು ಇವೆ.

ಶ್ರೀ ಸಂಜೀವನಾಥ ಐಕಳ.—ಮಾಸ್ಟರ್ ಪ್ಲಾನ್ ತಯಾರು ಮಾಡುವುದಕ್ಕೆ ಆರ್ಡರ್ ಕೊಟ್ಟಿರುವುದು ಒಳ್ಳೆಯದೇ, ಆದರೆ ಇದಕ್ಕೆ ಬೇಕಾದ ಸಿಬ್ಬಂದಿ ಮತ್ತು ಎಕ್ವಿಪ್‌ಮೆಂಟು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಬಾಕಿ ಕಡೆಗಳಲ್ಲಿ ಇಲ್ಲದೇ ಎಷ್ಟೋ ಪ್ಲಾನುಗಳನ್ನು ಹಾಗೆಯೇ ಪೆಂಡಿಂಗ್ ಇಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಸಿಬ್ಬಂದಿಗೆ ಬೇಕಾದ ಇನ್‌ಸ್ಟ್ರುಮೆಂಟುಗಳನ್ನು ಕೊಟ್ಟಿದ್ದೇವೆ, ಇನ್ನೂ ಹೆಚ್ಚಾಗಿ ಬೇಕೆಂದರೆ ಕೊಡುತ್ತೇವೆ, ಅಡ್ಡಿ ಇಲ್ಲ.

ಶ್ರೀ ವಿ. ಎಂ. ದೇವ್.—ಈಗ ಎಷ್ಟು ಸಿಬ್ಬಂದಿ ನೇಮಿಸಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಏಳು ಎಕ್ಸಿಕ್ಯೂಟೀವ್ ಇಂಜನಿಯರುಗಳ ಸರ್ಕಲ್ ಇದೆ, ಸುಮಾರು 25 ಸಬ್ ಡಿವಿಜನ್‌ಗಳು ಇವೆ. ಅವರಿಗೆ ಸಂಬಂಧಪಟ್ಟ ಜ್ಯೂನಿಯರ್ ಇಂಜನಿಯರುಗಳು ಮತ್ತು ಸೂಪರ್‌ವೈಸರುಗಳು ಇದ್ದಾರೆ. ಜೂನಿಗೆ ರೆಗ್ಯೂಲರ್ ಎಕ್ಸಿಕ್ಯೂಟೀವ್ ಇಂಜನಿಯರವರ ಸಿಬ್ಬಂದಿಯನ್ನೂ ಉಪಯೋಗಿಸಿಕೊಂಡು ಎಸ್ಟಿಮೇಟುಗಳನ್ನು ತಯಾರು ಮಾಡುತ್ತಾರೆ. ಇನ್ನೂ ಹೆಚ್ಚು ಸಿಬ್ಬಂದಿಬೇಕು ಎಂದು ಹೇಳುವುದಾದರೆ ಅದನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಸಿದ್ಧವಾಗಿದ್ದೇವೆ.

Crops that are to be included in the category of Bagayat (Garden) for reassessing the Land Revenue.

*Q.—1022 **Smt. B. L. SUBBAMMA** (Chickmagalur).—

Will the Govenment be pleased to state :—

(*a*) the crops that are to be included in the category of Bagayat (Garden) for reassessing the land revenue ;

(*b*) whether it is a fact that cardamom and oranges are considered as Bagayat crops.

(*c*) the acreage of land under orange cultivation fixed for treating the same as bagayat ?

A.— **Sri M. V. KRISHNAPPA** (Minister for Revenue).—

(*a*) (i) Areca, cocoanut, plantain, betel leaves and pepper ;

(ii) *Pot Bagayat* :—Mulberry, chillies and vegetables on lands irrigated by Government source of water by gravitation ;

(iii) *Mot Bagayat* :—Paddy or sugarcane or ragi or any other crop grown by lift irrigation ;

(iv) *Wat Hukum Bagayat* :—Crops like cocoanut, mangoes, mulberry, tamarind and cashewnut—grown on lands with rain water ;